<u>ಅಸಲು ದಾವಾಃ-</u> 198/2014 ಪಿ.ಡಬ್ಲ್ಯೂ- 2

ದಿನಾಂಕಃ 15.12.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.ಯು ಕೆ ವಕೀಲರಿಂದ</u>

ನನಗೆ ಕ್ರಯಪತ್ರದ ವಿಚಾರವು ಗೊತ್ತಾದ ಸಮಯದಲ್ಲಿ ನನ್ನ ತಾಯಿ ಹಾಲಮ್ಮ ಜೀವಂತವಿದ್ದರು ಎಂದರೆ ಸರಿ. ಸದರಿ ಕ್ರಯಪತ್ರವು ಸುಳ್ಳು ಪತ್ರ ಎಂದು ನನ್ನ ತಾಯಿಯ ಮೂಲಕ ತಕರಾರು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಸಲ್ಲಿಸಿಲ್ಲ ನನ್ನ ತಾಯಿ ತಕರಾರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಕ್ರಯಪತ್ರವು ಸುಳ್ಳು ಎಂದು ನನ್ನ ತಾಯಿಯು ತಕರಾರು ಸಲ್ಲಿಸಿದ್ದರ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಶಾನೆ ಪಿ ದಾಖಲೆಗಳನ್ನು ನೋಡಿ ಯಾವ ದಾಖಲೆಯನ್ನು ನನ್ನ ತಾಯಿಯು ಸಲ್ಲಿಸಿದ್ದ ತಕರಾರು ಎಂದರೆ ಸಾಕ್ಷಿಯು ಇದರಲ್ಲಿ ನನ್ನ ತಾಯಿ ಸಲ್ಲಿಸಿದ ತಕರಾರು ಇಲ್ಲ ಎಂದು ನುಡಿಯುತ್ತಾರೆ. ಕ್ರಯಪತ್ರದ ವಿರುದ್ಧ ನನ್ನ ತಾಯಿ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಹಾಗಾಗಿ ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿ ಆಗಿರುತ್ತದೆ ಎಂದರೆ ಮೋಸದಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ಪಹಣಿ ಆಗಿದ್ದರ ವಿರುದ್ಧ ಎಸಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕ್ರಯಪತ್ರದ ದಿನಾಂಕದಿಂದ ಪ್ರತಿವಾದಿಯ ದಾವಾ ಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕ್ರಯಪತ್ರದ ದಿನಾಂಕದಿಂದ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ 5 ಜನ ಅವರೆಂದರೆ ಬಸಪ್ಪ, ಮಾಯಮ್ಮ, ಹನುಮಂತಪ್ಪ, ರತ್ನಮ್ಮ ಮತ್ತು ನಾನು ಎಂದು ನುಡಿಯುತ್ತಾರೆ. ಪ್ರತಿವಾದಿಯು ನನ್ನ ಅಣ್ಣ

ಹನುಮಂತಪ್ಪರವರ ಮಗ ಎಂದರೆ ಸರಿ. ಹನುಮಂತಪ್ಪರವರ ಹೆಂಡತಿಯ ಹೆಸರು ಎಂದರೆ ಸರಸ್ವತಮ್ಮ. ಹನುಮಂತಪ್ಪ ರವರಿಗೆ ಪ್ರವೀಣ ಎಂಬ ಮತ್ತೊಬ್ಬ ಮಗ ಇದ್ದಾನೆ ಎಂದರೆ ಸರಿ.

ನನ್ನ ಅಣ್ಣ ಬಸಪ್ಪರವರ ಹೆಂಡತಿ ಮತ್ತು ಮಕ್ಕಳು ಯಾರು ಎಂದರೆ ಸಾಕ್ಷಿಯು ಬಸಪ್ಪ ತೀರಿಕೊಂಡಿರುತ್ತಾರೆ, ಅವರ ಹೆಂಡತಿ ರೇಣುಕಮ್ಮ, ಮಕ್ಕಳು ರವಿ, ಸತೀಶ, ಬೇಬಿ, ರತ್ನಮ್ಮ ಎಂದು ನುಡಿಯುತ್ತಾರೆ. ನನ್ನ ಮತ್ತು ಸತೀಶ್ ರವರ ನಡುವೆ ಮತ್ತೊಂದು ದಾವೆ ನಡೆಯುತ್ತಿದೆ ಎಂದರೆ ಸಾಕ್ಷಿಯು ದಾವೆ ತೀರ್ಮಾನವಾಗಿರುತ್ತದೆ ಎಂದು ನುಡಿಯುತ್ತಾರೆ. ಯಾವ ಆಸ್ತಿಗಳ ಮೇಲೆ ಸತೀಶ್ ಮತ್ತು ನಮ್ಮ ಮಧ್ಯೆ ಈ ಹಿಂದೆ ದಾವೆ ನಡೆದಿರುತ್ತದೆ ಎಂದರೆ ಸಾಕ್ಷಿಯು ಹೊಸಮಳಲಿ ಗ್ರಾಮದ ಸರ್ವೆ ನಂ.70 ಮತ್ತು 71 ರ ಮೇಲೆ ಎಂದು ನುಡಿಯುತ್ತಾರೆ. ಯಾವ ವಿಚಾರಕ್ಕೆ ದಾವೆ ನಡೆದಿರುತ್ತದೆ ಎಂದರೆ ಮರಣ ಶಾಸನ ಪತ್ರದ ಮೇಲೆ ದಾವೆ ನಡೆದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆ ಏನು ತೀರ್ಮಾನ ಆಗಿರುತ್ತದೆ ಎಂದರೆ ಸಾಕ್ಷಿಯು ಸತೀಶ್ ರವರು ಹಾಕಿದ್ದ ದಾವೆಯು ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆಯ ತೀರ್ಮಾನದ ವಿರುದ್ಧ ಸತೀಶ್ ರವರು ಅಪೀಲು ಹೋಗಿರುತ್ತಾರೆ ಎಂದರೆ ಸರಿ.

ನನ್ನ ಅಕ್ಕ ಮಾಯಮ್ಮ ಮತ್ತು ರತ್ನಮ್ಮ ಜೀವಂತವಿದ್ದಾರಾ ಎಂದರೆ ಹೌದು. ಪ್ರತಿವಾದಿಯ ತಂದೆ ತಾಯಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಮಾಯಮ್ಮ, ರತ್ನಮ್ಮ, ಪ್ರತಿವಾದಿಯ ತಮ್ಮ ಪ್ರವೀಣ ಹಾಗೂ ಬಸಪ್ಪರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಹೊನ್ನಾಳಿ